ಬಾರ್ ಅಂಡ್ ರೆಸ್ಟೋರೆಂಟ್‌ನ ಒಳಗೆ ಬಂದು ಹೀಗಂದ ಗುಂಡ...
**ಗುಂಡ:** ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು.
**ವೈಟರ್:** ನೀವು ತುಂಬಾ ಕುಡಿದಿರುವಿರಿ. ಈಗ ಫೆಬ್ರುವರಿ ತಿಂಗಳಲ್ಲವೆ?
**ಗುಂಡ:** ಓ... ಹೌದೇ? ಹಾಗಾದರೆ ಇವತ್ತು ನನ್ನಾಕೆ ನನ್ನನ್ನು ಮನೆಗೆ ಸೇರಿಸಿಕೊಳ್ಳಲಾರಳು. ಏಕೆಂದರೆ ಯಾವತ್ತೂ ಹೊಸ ವರ್ಷದ ಪಾರ್ಟಿಯಿಂದ ಇಷ್ಟು ತಡವಾಗಿ ನಾನು ಮನೆಗೆ ಹೋಗಿಲ್ಲ.

---

**ಗುಂಡ:** ಹೊಸ ವರ್ಷಾಚರಣೆ ಬಂತು.
**ಪುಂಡ:** ಅದೆಷ್ಟೇ ಅದ್ದೂರಿಯಾಗಿ ಆಚರಿಸಿದರೂ ಈ ಹೊಸ ವರ್ಷ 12 ತಿಂಗಳುಗಳಿಗಿಂತ ಹೆಚ್ಚು ಬಾಳಲಾರದು!

---

ಒಬ್ಬ ಧನಾತ್ಮಕ ವ್ಯಕ್ತಿ ಹೊಸ ವರ್ಷದ ಆಗಮನಕ್ಕಾಗಿ ಮತ್ತು ಒಬ್ಬ ಋಣಾತ್ಮಕ ವ್ಯಕ್ತಿ ಹಳೆ ವರ್ಷದ ನಿರ್ಗಮನಕ್ಕಾಗಿ ಡಿಸೆಂಬರ್ 31ರ ಮಧ್ಯರಾತ್ರಿಯವರೆಗೂ ಕಾಯುತ್ತಾನೆ!

---

ಕಾಲೇಜ್ ಕನ್ನಿಕೆಯಾಗಿರುವ ಗುಂಡನ ಮಗಳಿಂದ ಹೊಸ ವರ್ಷದ ನಿಮಿತ್ತ ಓರಗೆಯ ಗಂಡು ಸ್ನೇಹಿತರಿಗಾಗಿ ಒಂದು ವಾಟ್ಸ್ಆ್ಯಪ್ ಸಂದೇಶ ಬಂದಿತ್ತು. ಅದು ಹೀಗಿತ್ತು... '2026ನೇ ವರ್ಷ ಆಗಮಿಸುತ್ತಿದೆ... 2025ರಲ್ಲಿ ನನ್ನಿಂದಾಗಿ ಯಾರದ್ದಾದರೂ ಹೃದಯಕ್ಕೆ ನೋವುಂಟಾಗಿದ್ದರೆ, ಅದು ನಿಮ್ಮ ತಪ್ಪಿನಿಂದಲೇ ಆಗಿರುತ್ತದೆಯೆಂಬುದನ್ನು ಮನನ ಮಾಡಿಕೊಳ್ಳಿ ಮತ್ತು ಅಂಥವರು ಬಂದು ನನ್ನಲ್ಲಿ ಕ್ಷಮೆ ಯಾಚಿಸಿ!'

---

ನವವರ್ಷದಲ್ಲಿ ನನ್ನೆಲ್ಲಾ ಗೆಳೆಯರ ತೂಕವನ್ನು ಕನಿಷ್ಠ ಹತ್ತು ಕೆ.ಜಿ.ಗಳಷ್ಟು ಹೆಚ್ಚಿಸುವಲ್ಲಿ ಸಹಕರಿಸುವುದೇ ನನ್ನ ಹೊಸ ವರ್ಷದ ಸಂಕಲ್ಪವಾಗಿದೆ. ಏಕೆಂದರೆ ಆ ವಿಧಾನದ ಮೂಲಕವಾದರೂ ನಾನು ತೆಳ್ಳಗೆ ಕಾಣಬಹುದೆನ್ನುವುದು ನನ್ನ ಉಪಾಯ.

---



ನೀವು ದೇವರ ಹುಂಡಿಗೆ ಹಾಕಿದ 'ಚೆಕ್' ಬೌನ್ಸ್ ಆಗಿದೆ!...

---

ಹೊಸ ವರ್ಷದಾರಂಭದಲ್ಲಿ ಸಾರ್ವಜನಿಕ ಹಿತಾಸಕ್ತಿಯಿಂದ ಗುಂಡ ಸೂಚನೆ ನೀಡಿದ. ಅದು ಹೀಗಿತ್ತು... ದಿನಂಪ್ರತಿ ವಾಕಿಂಗ್ ಹೋಗುವ ಅಭ್ಯಾಸವಿರುವವರು ಜನವರಿ ಮೊದಲ ವಾರ ದಯವಿಟ್ಟು ವಾಕಿಂಗ್‌ಗೆ ತೆರಳದಿರುವುದೊಳಿತು. ವಾಕಿಂಗ್ ಹಾದಿಯಲ್ಲಿ ಹೊಸ ವರ್ಷದ ನಿಮಿತ್ತ ಸಂಕಲ್ಪ ಹೊತ್ತವರ ಜನಜಂಗುಳಿಯಿರುತ್ತದೆ. ಒಂದು ವಾರದ ನಂತರ ಅದು ಯಥಾಸ್ಥಿತಿಗೆ ಮರಳುತ್ತದೆ.

---

ಹೊಸ ವರ್ಷದ ಪಾರ್ಟಿಯಲ್ಲಿ ಗುಂಡ ತನ್ನ ಮಿತ್ರ ಪುಂಡನ ಬಳಿ ಸಿಗರೇಟ್ ಕೇಳಿದ...
**ಪುಂಡ:** ನೀನು ಹೊಸ ವರ್ಷದಿಂದ ಸಿಗರೇಟ್ ಸೇದುವುದಿಲ್ಲವೆಂದು ಮಾತು ಕೊಟ್ಟಿರುವೆ ತಾನೆ?
**ಗುಂಡ:** ಹೌದು, ನಾನು ಆ ನಿರ್ಧಾರಕ್ಕೆ ಬದ್ಧನಾಗಿದ್ದೇನೆ ಮತ್ತು ಅದರ ಕಾರ್ಯಾಚರಣೆಯ ಮೊದಲ ಹಂತದಲ್ಲಿದ್ದೇನೆ.
**ಪುಂಡ:** ಮೊದಲ ಹಂತ?
**ಗುಂಡ:** ಹೌದು, ನಾನು ಸ್ವಯಂ ಸಿಗರೇಟು ಖರೀದಿಸದೆ ಇರುವುದು, ಅದನ್ನು ಬಿಟ್ಟು ಬಿಡುವ ನಿರ್ಧಾರದ ಮೊದಲ ಹಂತವಾಗಿದೆ.

---

ವಿರೋಧ ಪಕ್ಷದ ನಾಯಕ ಗುಂಡಣ್ಣನವರ ಪ್ರಕಾರ, ಹೊಸ ವರ್ಷದ ದಿನಾಚರಣೆಯೆನ್ನುವುದು... 'ಹಳೆ ವರ್ಷದ ಕ್ಯಾಲೆಂಡರನ್ನು ನಾವು ಪುನಃ ಬಳಸದಂತೆ ಕ್ಯಾಲೆಂಡರ್ ಕಂಪನಿಗಳು ಒಂದು ದಿನದ ರಜೆ ಮತ್ತು ಮಜಾದ ಆಮಿಷವೊಡ್ಡಿ ಹೂಡಿದ ಹುನ್ನಾರವಾಗಿದೆ'.

---

ಗುಂಡನ ಗೆಳೆಯರ ಬಳಗದ ವಿಜ್ಞಾಪನೆ...
'ಹೊಸ ವರ್ಷದಾಚರಣೆಯ ಸಂದರ್ಭದಲ್ಲಿ ದಯವಿಟ್ಟು ಮದ್ಯಪಾನ ಮಾಡಿ ವಾಹನ ಚಲಾಯಿಸಬೇಡಿ. ನೀವು ಸುರಕ್ಷಿತವಾಗಿ ವಾಹನ ಚಲಾಯಿಸುವ ಸಲುವಾಗಿ ನಾವು ನಿಮಗೆ ಸಹಾಯವೆಸಗಲು ಉದ್ಯುಕ್ತರಾಗಿದ್ದೇವೆ, ದಯವಿಟ್ಟು ನಮಗೆ ಕರೆಮಾಡಿ. ನಮ್ಮಲ್ಲಿ ಎಲ್ಲಾ ವಯಸ್ಸಿನ ಅನುಭವಿ ಜನರಿದ್ದಾರೆ.
ನಮ್ಮ ಸ್ವಯಂ ಸೇವಕರು ಬಂದು ನಿಮಗಾಗಿ ಕುಡಿಯುತ್ತಾರೆ ಮತ್ತು ನೀವು ಸುರಕ್ಷಿತವಾಗಿ ವಾಹನ ಚಲಾಯಿಸಿರಿ'.

---

**ವರದಿಗಾರ:** (ಡಿಸೆಂಬರ್ 31ರ ನಡುರಾತ್ರಿ): ಗುಂಡಣ್ಣನವರೇ ನಿಮ್ಮ ಹೊಸ ವರ್ಷದ ಸಂಕಲ್ಪಗಳೇನು?
**ಗುಂಡ:** ಸ್ವಲ್ಪ ತಡೆಯಿರಿ. ನನ್ನ ಹೆಂಡತಿಯಿನ್ನೂ ಅವುಗಳ ಪಟ್ಟಿಯನ್ನು ನನ್ನ ಕೈಗಿತ್ತಿಲ್ಲ.

---

ಡಿಸೆಂಬರ್ 31ರ ಸಂಜೆ...
**ಶ್ರೀಮತಿ ಗುಂಡ:** ಈ ಬಾರಿಯ ಹೊಸ ವರ್ಷದಾಚರಣೆಯನ್ನು ನಾವು ಹೊರಗೆ ಹೋಗಿ ಆಚರಿಸಿ ಸಂತೋಷ ಪಡೋಣ.
**ಗುಂಡ:** (ಹೊರಗೆ ಹೊರಡುತ್ತಾ) ಸರಿ ಹಾಗಾದರೆ, ಜನವರಿ ಒಂದರಂದು ನಾವು ಮತ್ತೆ ಭೇಟಿಯಾಗೋಣ.

---

ಗುಂಡನ ಬಳಿ ರಾತ್ರಿ ಸಾಂತಾಕ್ಲಾಸ್ ಬಂದು 'ಏನಾದರೂ ಬಯಕೆಗಳಿದ್ದರೆ ಕೇಳು' ಎಂದೆನ್ನಲು ಗುಂಡ ಹೊಸ ಹೆಂಡತಿ ಬೇಕೆಂದು ಬಿನ್ನವಿಸಿಕೊಂಡ. ತಕ್ಷಣ ಸಾಂತಾಕ್ಲಾಸ್‌ನಿಂದ ಗುಂಡನಿಗೆ ಯದ್ವಾತದ್ವಾ ಒದೆ ಬಿದ್ದವು. ಏಕೆ ಗೊತ್ತೆ? ಸಾಂತಾಕ್ಲಾಸ್‌ನ ವೇಷ ಧರಿಸಿ ಸಾಕ್ಷಾತ್ ಶ್ರೀಮತಿ ಗುಂಡಳೇ ಗುಂಡನ ಬಳಿ ಬಂದಿದ್ದಳು.

---

**ಪುಂಡ:** ಸಾಂತಾಕ್ಲಾಸ್ ಆದೇಕೆ ಪುರುಷನಾಗಿದ್ದಾನೆ?
**ಗುಂಡ:** ಏಕೆಂದರೆ ಯಾವುದೇ ಮಹಿಳೆ ಒಂದೇ ಡ್ರೆಸ್ ಅನ್ನು ಪ್ರತಿವರ್ಷ ಧರಿಸಲಾರಳು.

ಸಂಗ್ರಹ: **ಶರದ ಕುಲಕರ್ಣಿ, ಬೀದರ್**